ಶ್ರೀ ವೈ.ಕೆ. ರಾಮಯ್ಯ : ರೇಷ್ಮೆ ಗೂಡಿನ ಬೆಲೆ 200-300 ರೂಪಾಯಿ ಇದ್ದದ್ದು 60-70ರೂಪಾಯಿಗೆ ಇಳಿದಿದೆ. ಬಹುತೇಕ ಗ್ರಾಮೀಣ ಬದುಕಿಗೆ ಆಶ್ರಯವಾಗಿರತಕ್ಕ ಈ ಕಸುಬು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿರುವುದರಿಂದ ತಾವೇನಾದರೂ ಮಾಡಿ 17ನೇ ತಾರೀಖಿನೊಳಗೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವುದಾದರೆ ನಾನು ಈಗ ವಿವರಣೆ ಕೇಳುವ ಪ್ರಯತ್ನ ಮಾಡುವುದಿಲ್ಲ.

ಅಧ್ಯಕ್ಷರು : ಬರೆದು ಕಳುಹಿಸು. ಈಗ ಅವರ ಪ್ರಶ್ನೆಗೆ ಸಪ್ಲಿಮೆಂಟರಿ ಇದ್ದರೆ ಕೇಳಿ.

ಶ್ರೀ ವೈ.ಕೆ. ರಾಮಯ್ಯ : ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ವಿಧವಾದ ಆಮದನ್ನು ಈ ರಾಷ್ಟ್ರಕ್ಕೆ ಮಾಡಿಕೊಳ್ಳುತ್ತಿದ್ದೀರಿ? ನೀವು ಅಂದರೆ ಕೇಂದ್ರ ಸರ್ಕಾರ. ಇದು ರಾಜ್ಯ ಸರ್ಕಾರದ ಸಮಸ್ಯೆ ಅಲ್ಲ. ರಾಜ್ಯ ಸರ್ಕಾರಕ್ಕೂ ಇದಕ್ಕೂ ಸಂಬಂಧವಿಲ್ಲ. ಆದಕಾರಣ ಎಷ್ಟು ವಿಧವಾದ ಆಮದನ್ನು ಕಾನೂನಿನ ಚೌಕಟ್ಟಿನಲ್ಲಿ ಕೇಂದ್ರ ಸರ್ಕಾರ ಮಾಡಿ ಕೊಳ್ಳುತ್ತಿದೆ? ಕದ್ದು ಬರುತ್ತಿರತಕ್ಕ ಮಾಲು ಎಷ್ಟು? ಗ್ಲಾಂಡಸ್ಟೈನ್ ಇಂಪೋರ್ಟ್. ಇಂಪೋರ್ಟ್ ಎಂದು ಹೇಳುವುದಕ್ಕಾಗುವುದಿಲ್ಲ. ಗ್ಲಾಂಡಸ್ಟೈನ್ ಅರೈವರ್ ಅದು ಎಷ್ಟು ನಿಮ್ಮ ಮಾಹಿತಿ ಪ್ರಕಾರ? ಮೂರನೆಯದಾಗಿ ಕೇಂದ್ರ ಸರ್ಕಾರದ ಉದಾರ ಆರ್ಥಿಕ ನೀತಿಯಿಂದ ಮಾಡಿರುವಂತ ಪಟ್ಟಿಯಲ್ಲಿ ಇದೇನಾದರೂ ಆಮದು ನೀತಿಯಲ್ಲಿ ಸೇರಿಕೊಂಡಿದೆಯೇ? ನಾಲ್ಕನೆಯದಾಗಿ, ಈ ರಾಷ್ಟ್ರಕ್ಕೆ ರೇಷ್ಮೆ ಆಮದು ಮಾಡಿಕೊಳ್ಳುವುದಕ್ಕೆ ಯಾವುದಾದರೂ ಸಕಾರಣ ಇದೆಯೇ? Is there any justification for import of the Raw silk? ಇಷ್ಟಕ್ಕೆ ದಯವಿಟ್ಟು ತಾವು ಉತ್ತರ ಕೊಡಬೇಕು?

ಡಾ: ಜಿ. ಪರಮೇಶ್ವರ : ಇದಕ್ಕೆ ಪ್ರತ್ಯಕ್ಷವಾಗಿ ನಾನು ಉತ್ತರ ಒದಗಿಸಿಕೊಡುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರದ ವತಿಯಿಂದ ನಮಗೆ ಮಾಹಿತಿ ಬರಬೇಕು. ಕಾರಣ, ಕಳ್ಳಸಾಗಾಣಿಕೆಯಲ್ಲಿ ಬರತಕ್ಕ ಮಾಲು ಎಷ್ಟು ಎಂದು ಪ್ರಶ್ನೆ ಕೇಳಿದ್ದೀರಿ? ಅದಕ್ಕೆ ಯಾರೂ ಸ್ಟ್ಯಾಟಿಸ್ಟಿಕ್ಸ್ ಕಲೆಕ್ಟ್ ಮಾಡಿ ಇಡುವುದಕ್ಕಾಗುವುದಿಲ್ಲವೆಂದು ಗೆಸ್ ಮಾಡಿ ಇಟ್ಟಿದ್ದಾರೆ. 4 ಸಾವಿರಕ್ಕೂ ಹೆಚ್ಚು ಟನ್ ಕಳೆದ ವರ್ಷ ಬಂದಿದೆ ಎಂದು ಒಂದು ಅಂದಾಜಿನ ಮೇಲೆ,ಉಪಯೋಗ ಮಾಡತಕ್ಕವರ ಜೊತೆ ಸ್ಟಾಟಿಸ್ಟಿಕ್ಸ್ ಕಲೆಕ್ಟ್ ಮಾಡಿ ಸೆಂಟ್ರಲ್ ಸಿರಿಕಲ್ಚರ್ ಬೋರ್ಡಿನವರು ವರ್ಕ್‌ಔಟ್ ಮಾಡಿ ಇಟ್ಟಿದ್ದಾರೆ. ಅಷ್ಟು ಬಿಟ್ಟರೆ ನಮಗೆ ಬೇರೆ ರೀತಿಯಲ್ಲಿ ಅಂಕಿಅಂಶ ಸಿಗುತ್ತಿಲ್ಲ. ಆ ದೃಷ್ಟಿಯಿಂದ ಪ್ರತ್ಯೇಕವಾಗಿ ನಾನು ಅವರಿಗೆ ತಿಳಿಸಿಕೊಡುತ್ತೇನೆ.

ಶ್ರೀ ಎನ್.ಜಿ. ನಾಯಕ್ : ಇದರಲ್ಲಿ ಮೊಟ್ಟೆ ಮಾಡತಕ್ಕ ಕೇಂದ್ರವನ್ನು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ನಾನು ಸದನದಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಬಡ ರೈತರ ಅನುಕೂಲಕ್ಕೋಸ್ಕರ ಮಾಡಬೇಕು. ಏಕೆಂದರೆ ಬಹಳ ಚೆನ್ನಾಗಿ ಬೆಳೆಯುತ್ತಿದೆ. ಬಳ್ಳಾರಿ, ಕೂಡ್ಲಿಗಿ, ರಾಯದುರ್ಗ ಈ ಎಲ್ಲ ಸೇರಿಸಿ ಒಂದು ಕೇಂದ್ರ ಮಾಡಿದರೆ ಒಳ್ಳೆಯದು ಅನ್ನಿಸುತ್ತದೆ. ನನಗೆ ಸದನದಲ್ಲಿ ಆ ಬಗ್ಗೆ ಆಶ್ವಾಸನೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

(ಉತ್ತರವಿಲ್ಲ)

ಕಟ್ಟಡಗಳ ನಿರ್ಮಾಣಕ್ಕಾಗಿ ಪರವಾನಿಗೆಯ ಮಂಜೂರಾತಿ

42 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಯಲ್ಲಿ ಬಹುಮಹಡಿ ಕಟ್ಟಡ ಮತ್ತಿತರ ಅಕ್ರಮ ಕಟ್ಟಡಗಳನ್ನು ನಿರ್ಮಿಸಲು ಪರವಾನಗಿ ಕೊಟ್ಟ ಬಗ್ಗೆ ತನಿಖೆ ನಡೆಸುವಂತೆ ಕೇಳಲಾಗಿತ್ತೇ?

ಅ) ಆದಕ್ಕೆ ಸಂಬಂಧಪಟ್ಟ 22 ಕ್ಕೂ ಮೀರಿ ದಾಖಲಾತಿಗಳು ಕಾಣೆಯಾಗಿದೆ ಎಂಬ ವದಂತಿಗಳು ನಿಜವೇ?

ಇ) ಆದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಇನ್ನೂ ಇಲ್ಲ. ಆದರೆ ಈ ಬಗ್ಗೆ ಮೈಸೂರು ಮಹಾನಗರ ಪಾಲಿಕೆಯು ತನಿಖೆಗಾಗಿ ಕೌನ್ಸಿಲರ್ಗಳ ಒಂದು ಸಮಿತಿಯನ್ನು ರಚಿಸಿದೆ.

ಆ) ಹೌದು

ಇ) ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳಲು ಪ್ರಸ್ತಾವಿತ ಸಮಿತಿಯ ತನಿಖಾ ವರದಿಗಾಗಿ ನಿರೀಕ್ಷಿಸುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈ ಉತ್ತರ ಮೈಸೂರು ನಗರ ಪಾಲಿಕೆಗೆ ಸಂಬಂಧ ಇದೆ. ಬಹು ಮಹಡಿ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟುವುದಕ್ಕೆ ಪರವಾನಗಿ ಕೊಟ್ಟಿದ್ದಾರೆಂಬುದು ಆಪಾದನೆ. ಈ ಆಪಾದನೆಗೆ ಸಂಬಂಧಪಟ್ಟ ಹಾಗೆ ಕೌನ್ಸಿಲರ್ಗಳ ಸಮಿತಿ ಮಾಡಿದ್ದಾರೆ. ಕಟ್ಟಡಕ್ಕೆ ಪರವಾನಗಿ ಕೊಟ್ಟಿದ್ದೇ ಕೌನ್ಸಿಲ್. ಅವರದ್ದೇ ಒಂದು ಸಮಿತಿ ವಿಚಾರಣೆಗಾಗಿ ಇದೆ ಅಂದರೆ ಕಳ್ಳನ ಕೈಗೆ ಗಂಟು ಕೊಟ್ಟರೆ ಎಷ್ಟರಮಟ್ಟಿಗೆ ರಕ್ಷಣೆ ಆಗಬಹುದು? ಕೌನ್ಸಿಲ್ ಹೊರತುಪಡಿಸಿ ಏನಾದರೂ ವಿಚಾರಣೆ ಮಾಡತಕ್ಕ ಆಲೋಚನೆಯನ್ನು ಮಂತ್ರಿಗಳು ಮಾಡುತ್ತಾರೆಯೇ? ಇದಕ್ಕೆ ಸಂಬಂಧಪಟ್ಟ ಹಾಗೆ 22 ಫೈಲುಗಳು, ದಾಖಲಾತಿ ಎಂದು ಬರೆದಿದ್ದಾರೆ. ನಾನು ಹೇಳುವುದು ಫೈಲುಗಳು ಕಾಣೆಯಾಗಿವೆ ಎಂದು ಸ್ಥಳೀಯವಾಗಿ ವಿಶೇಷ ಸುದ್ದಿ. ಈಗ ಫೈಲು ಕಾಣೆಯಾಗಿರುವುದು "ಹೌದು" ಎನ್ನುತ್ತಾರೆ. ಅದನ್ನು ಹುಡುಕುವುದು ಹೇಗೆ? ಯಾವ ಸಮಿತಿ ಪರವಾನಗಿ ಕೊಟ್ಟಿದೆಯೋ ಆ ಸಮಿತಿ ಫೈಲು ಹುಡುಕುವ ಕೆಲಸ ಮಾತ್ರ ಮಾಡುತ್ತದೆಯೇ ಅಥವಾ ನಿಮಗೂ ಏನಾದರೂ ರಾಜ್ಯದ ಮಂತ್ರಿಯಾಗಿ ಜವಾಬ್ದಾರಿ ಇದೆಯೇ? ಜವಾಬ್ದಾರಿ ಇದ್ದರೆ ಫೈಲು ಹುಡುಕತಕ್ಕ ಮತ್ತು ಪರವಾನಗಿ ಕೊಡತಕ್ಕ ಕೆಲಸವನ್ನು ನೇರವಾಗಿ ಸರ್ಕಾರ ಮಾಡುತ್ತದೆಯೇ? ಬೇರೆ ಇಂಡಿಪೆಂಡೆಂಟ್ ಬಾಡಿಯಿಂದ ತನಿಖೆ ಮಾಡುವುದಕ್ಕೆ ಆಲೋಚನೆ ಮಾಡುತ್ತದೆಯೇ?

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಹೇಳುವುದಾದರೆ, 22 ಫೈಲುಗಳ ಪೈಕಿ ಮೂರು ಫೈಲುಗಳನ್ನು ಮಾತ್ರ ಕೊಟ್ಟಿದ್ದಾರೆಂದು ನಮ್ಮ ಗಮನಕ್ಕೆ ಬಂದಿರುವುದು ಮಾನ್ಯ ಸದಸ್ಯರು ಪ್ರಶ್ನೆ ಹಾಕಿದ ಮೇಲೆ ಇದರಲ್ಲಿ ಏನಾಗಿದೆ ಅಂದರೆ, ಸೆಕ್ಷನ್ 68ರ ಪ್ರಕಾರ ಕಸ್ಟೋಡಿಯನ್ ಈಸ್ ಕಮೀಷನರ್. ಎಲ್ಲ ಫೈಲುಗಳು ಕಮೀಷನರ್ರವರ ಕಸ್ಟಡಿಯಲ್ಲಿ ಇರಬೇಕಾಗುತ್ತದೆ. ಇದರ ಜೊತೆಗೆ ಸೆಕ್ಷನ್ 60ರ ಪ್ರಕಾರ ಮೇಯರ್ರವರಿಗೆ ಫೈಲುಗಳನ್ನು ಕಾಲ್ಚರ್ ಮಾಡುವ ಅಧಿಕಾರವಿದೆ. ಆ ಫೈಲುಗಳನ್ನು 15 ದಿವಸದೊಳಗೆ ಪೆರ್ಯೂಸ್ ಮಾಡಿ ವಾಪಸು ಕಳುಹಿಸಬೇಕಾಗುತ್ತದೆ. ಇದರಲ್ಲಿ ಏನಾಗಿದೆ ಅಂದರೆ, ಮೇಯರ್ರವರು ಫೈಲುಗಳನ್ನು ವಾಪಸು ಕಳುಹಿಸುವಾಗ ಬರೀ ಮೂರು ಫೈಲುಗಳನ್ನು ಮಾತ್ರ ಕಳುಹಿಸಿದ್ದಾರೆ. ಮಿಕ್ಕಿದ ಫೈಲುಗಳು ಬಂದಿಲ್ಲ. ಜೊತೆಗೆ ಇನ್ನೊಂದು ಪೆಕ್ಯುಲೀಯಾರಿಟಿ ಏನಾಗಿದೆ ಅಂದರೆ, ಕೌನ್ಸಿಲ್ಲವರು ಒಂದು ಕಮಿಟಿ ಮಾಡಿದ್ದಾರೆ. ಆಕ್ಟ್ ಪ್ರಕಾರ ಅವರಿಗೆ ಪವರ್ಸ್ ಇಲ್ಲ. ಇದು ಸರಿಯಲ್ಲ. ತನಿಖೆ ಮಾಡಿಸಿ ಕಾನೂನು ಪ್ರಕಾರ ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಮಾಡುತ್ತೇವೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಕಳ್ಳತನ ಹಿಡಿಯುವುದಕ್ಕೆ ಕಳ್ಳರನ್ನು ನೇಮಕ ಮಾಡುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಕಳ್ಳತನ ಹಿಡಿಯುವುದಕ್ಕೆ ಯಾರನ್ನು ನೇಮಕ ಮಾಡುವುದು ಅಂದರೆ ಕಳ್ಳರನ್ನು ನೇಮಕ ಮಾಡುವುದು.

ಶ್ರೀ ಚೌಡರೆಡ್ಡಿ : ಇದನ್ನು ಸರ್ಕಾರ ಮಾಡಲಿಲ್ಲ. ಸರ್ಕಾರದ ಗಮನಕ್ಕೆ ಇದು ಬಂದಿಲ್ಲ. ಮೈಸೂರು ಮಹಾನಗರಪಾಲಿಕೆ ಕೌನ್ಸಿಲರ್ಸ್ ಮಾಡಿಕೊಂಡಿದ್ದಾರೆ. ಕಾನೂನು ಪ್ರಕಾರ ಕಮಿಟಿ ನೇಮಕ ಮಾಡುವುದಕ್ಕೆ ಅಧಿಕಾರವಿಲ್ಲವೆಂದು ಹೇಳುತ್ತಿದ್ದೇನೆ. ಅದು ಸರಿಯಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಚುನಾಯಿತ ಪ್ರತಿನಿಧಿಗಳಿಗೂ ಮತ್ತು ಅಧಿಕಾರಿಗಳಿಗೂ ಸಂಬಂಧವೇನು? ಯಾವ ರೀತಿ ಸಂಬಂಧವಿರಬೇಕು ಎನ್ನುವ ಮೂಲ ಪ್ರಶ್ನೆ ಇದರಲ್ಲಿ ಅಡಗಿದೆ. ಚುನಾಯಿತ ಪ್ರತಿನಿಧಿಗಳು ಕಾರ್ಪೊರೇಷನ್ ನಡೆಸುತ್ತಾರೆ. ಕಮಿಷನರ್ರವರು ನಿಮ್ಮ ಸರ್ಕಾರದ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳು ಹೇಳಿದ ಹಾಗೆ ಕೇಳಬೇಕು. ತಾವೇ ಹೇಳಿದಹಾಗೆ, ಕೌನ್ಸಿಲ್ ನಿರ್ಣಯ ಮಾಡಿ ಫೈಲು ಕಳುಹಿಸಬೇಕೆಂದರೆ, ಕಳುಹಿಸದೇ ಇರತಕ್ಕ ಕಮಿಷನರ್ ಮೇಲೆ ಏನು ಕ್ರಮ ನಿಮ್ಮದು? ಹೀಗೆ ಮಹಾನಗರಪಾಲಿಕೆಗಳಲ್ಲಿ ನಿರೂಪಿಸಿರತಕ್ಕ ಪರವಾನಗಿಗೆ ಸರ್ಕಾರದ ಕೆಲವು ನಿಯಮಗಳಿವೆ.

ಆ ನಿಯಮಗಳ ವ್ಯಾಪ್ತಿಯಲ್ಲಿ ಕೊಡದಿದ್ದರೆ ತಕ್ಷಣ ಕ್ರಮ ತೆಗೆದುಕೊಂಡು ಇದನ್ನು ಪರಿಹರಿಸುತ್ತೀರಾ ಅಥವಾ ಇಲ್ಲವೆ? ಮತ್ತೆ ಪುನಃ ಕೋರ್ಟ್ ಕಛೇರಿ ಬೇಡ. ಮೈಸೂರುನಗರ ನಮಗೆಲ್ಲರಿಗೂ ಬಹಳ ಸುಂದರವಾಗಿರಬೇಕು. ದೇಶ ವಿದೇಶಗಳಿಂದ ಬರತಕ್ಕ ಜನ ಸಂತೋಷಪಡಬೇಕೆನ್ನುವ ದೃಷ್ಟಿಯಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಈವೊಂದು ಸೌಂದರ್ಯಕ್ಕೆ ಅಡ್ಡಿ ಬರತಕ್ಕ ರೀತಿಯಲ್ಲಿ ಕೌನ್ಸಿಲ್ ಕೆಲಸ ಮಾಡಲಿ, ಕಮೀಷನರ್ ಕೆಲಸ ಮಾಡಲಿ, ಅದು ಏನೇ ಇರಲಿ, ಇದು ಕನ್ನಡನಾಡಿನ ಕೆಲಸವೆಂದು ತಿಳಿದು ಸರ್ಕಾರದ ಮಂತ್ರಿಗಳಾದ ತಾವು ಇದನ್ನೂ ವಿಚಾರಣೆ ಮಾಡುವುದರ ಜೊತೆಗೆ ಕಮಿಷನರ್ರವರು ಏಕೆ ಫೈಲುಗಳನ್ನು ಕಳುಹಿಸಲಿಲ್ಲ ಎನ್ನತಕ್ಕದ್ದನ್ನು ಒಂದೆರಡು ದಿವಸಗಳಲ್ಲಿ ತನಿಖೆ ಮಾಡಿ ಈ ಸದನಕ್ಕೆ ಹೇಳುತ್ತೀರಾ?

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಏನಿದೆ ಅಂದರೆ, ಮಾನ್ಯ ಚಂದ್ರೇಗೌಡರಿಗೆ ಚೆನ್ನಾಗಿ ಗೊತ್ತಿದೆ. ಮೊದಲು ಇದ್ದ ಅಧ್ಯಕ್ಷರು 22 ಫೈಲುಗಳನ್ನು ತೆಗೆದುಕೊಂಡು ಅದರಲ್ಲಿ ಮೂರು ಫೈಲುಗಳನ್ನು ಮಾತ್ರ ವಾಪಸು ಕಳುಹಿಸಿದ್ದಾರೆ. ಮಿಕ್ಕಿದ್ದು ಮಿಸ್ ಆಗಿದೆ. ಅದರ ಬಗ್ಗೆ ತಾವು ಕೇಳಿದ್ದೀರಿ. ಈಗ ಕಮಿಷನರ್ರವರು ಕೆಲವು ಫೈಲುಗಳನ್ನು ಕೇಳಿದರೆ ಕೊಡುತ್ತಿಲ್ಲವೆಂದು ತಾವು ಹೇಳುತ್ತಾ ಇದ್ದೀರಿ. ಪ್ರತ್ಯೇಕವಾಗಿ ನಮಗೆ ತಿಳಿಸುತ್ತೇನೆ. ಅದರ ಬಗ್ಗೆ ಕಾನೂನಿನಲ್ಲಿ ಏನೇನು ಕಾರ್ಯಕ್ರಮಗಳಿವೆ ಅದರಲ್ಲಿ ಯಾರ್ಯಾರಿಗೆ ಏನೇನು ಪವರ್ಸ್ ಇದೆ ಅದನ್ನು ಯಾರಾದರೂ ವೈಲೇಟ್ ಮಾಡಿದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಯಾರೇ ಆಗಲಿ ಕಮಿಷನರ್ ಆಗಲಿ, ಅಧ್ಯಕ್ಷರಾಗಲಿ ಯಾರೇ ಆದರೂ ಕಾನೂನಿನ ಚೌಕಟ್ಟನ್ನು ಬಿಟ್ಟು ಹೋಗುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ, ನಾನು ಅದಕ್ಕೆ ಪ್ರೋತ್ಸಾಹ ನೀಡುವುದಿಲ್ಲ. ಅದನ್ನು ತಾವು ಪ್ರತ್ಯೇಕವಾಗಿ ನಮಗೆ ತಿಳಿಸಿ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ, ಇದುವರೆಗೆ ಸರ್ಕಾರದವರು ಯಾವುದಾದರೂ ಮಹಾನಗರ ಪಾಲಿಕೆಯ ಕಮಿಷನರ್ರವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೆ? ಆ ರೀತಿ ಅಕ್ರಮ ಮಾಡಿದವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೇ? ಅದು ನನ್ನ ಪ್ರಶ್ನೆ.

ಶ್ರೀ ಚೌಡರೆಡ್ಡಿ : ಈಗ ಯಾವ್ಯಾವುದೋ ನಮ್ಮ ಗಮನಕ್ಕೆ ಬಂದಿದೆ. ಅನೇಕ ಕಾರ್ಪೋರೇಷನ್ಗಳು ಅನೇಕ ಠರಾವುಗಳನ್ನು ಮಾಡುತ್ತವೆ. ತಾವು ಯಾವುದು ಎಂದು ಹೇಳಿ?

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರೇ, ತಾವು ಪ್ರಶ್ನೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ಮೋಟಮ್ಮನವರ ಹೆಸರನ್ನು ಕರೆದಿದ್ದೀರಿ. ಒಂದು ವಿಚಾರ. ಮೋಟಮ್ಮನವರ ಹೆಸರಿನ ಮುಂದೆ ಶ್ರೀ ಮೋಟಮ್ಮ ಎಂದು ಅಚ್ಚಾಗಿದೆ. ಶ್ರೀ ಮೋಟಮ್ಮನವರು ಯಾರು? ಶ್ರೀಮತಿ ಮೋಟಮ್ಮನವರು ಯಾರು?

ಶ್ರೀಮತಿ ಮೋಟಮ್ಮ : ಹೆಣ್ಣುಮಕ್ಕಳಿಗೆ ಗಂಡಸರ ಶಕ್ತಿ ಬಂದರೆ ನಾನು ಸಂತೋಷಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಈಗ ಗಂಡಸು-ಹೆಂಗಸು ಹೀಗೆ ಎರಡು ಅವತಾರದಲ್ಲಿದ್ದೀರಿ.

ಎಸ್.ಸಿ. ಮತ್ತು ಎಸ್.ಟಿ. ಮತ್ತು ಬಿ.ಸಿ.ಎಂ. ಹಾಸ್ಟೆಲ್‌ಗಳ ಮಂಜೂರಾತಿ

187 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಸರ್ಕಾರ ಮಂಜೂರು ಮಾಡಿರುವುದು? (ಜಿಲ್ಲಾವಾರು ಮಾಹಿತಿ ಕೊಡುವುದು)

ಆ) ಆ ಹಾಸ್ಟೆಲ್‌ಗಳಲ್ಲಿ ನಡೆಸಲು ಅದಕ್ಕೆ ಸಂಬಂಧಪಟ್ಟ ಹಾಗೆ ನೌಕರರನ್ನು ನೇಮಕ ಮಾಡಿದಿರಲು ಕಾರಣವೇನು?

ಇ) ಮೇಲಿನ ಸಿಬ್ಬಂದಿಗಳನ್ನು ಯಾವಾಗ ನೇಮಕ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ
ವಿದ್ಯಾರ್ಥಿನಿಲಯಗಳು - 191
ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ
ವಿದ್ಯಾರ್ಥಿನಿಲಯಗಳು - 222

ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ.

ಆ) ಮತ್ತು (ಇ) ಆರ್ಥಿಕ ಮಿತವ್ಯಯ ಆದೇಶವು ಜಾರಿಯಲ್ಲಿ ಇದ್ದ ಕಾರಣ ಹುದ್ದೆಗಳನ್ನು ತುಂಬಲು ತಡೆ ಇತ್ತು. ಈ ತಡೆ ಆದೇಶವನ್ನು ಸಡಿಲಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿ ಆರ್ಥಿಕ ಇಲಾಖೆಯು ಸಮಾಜ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ದಿನಾಂಕ 10-1-90ರಲ್ಲಿ ಆರ್ಥಿಕ ಇಲಾಖೆಯು ಅನುಮತಿ ನೀಡಿತ್ತು. ಆದರೆ, ಇಲಾಖಾ ನೇಮಕಾತಿ ಸಮಿತಿಗಳನ್ನು ರದ್ದು ಮಾಡಿದ್ದು ಕಾರಣ, ಖಾಲಿ ಇದ್ದ ಹುದ್ದೆಗಳನ್ನು ತುಂಬಲು ಸಾಧ್ಯವಾಗಿಲ್ಲ. ಇತ್ತೀಚೆಗೆ ಸರ್ಕಾರ ದಿನಾಂಕ 23-10-93ರಂದು ಹೊಸ ನೇಮಕಾತಿ ನಿಯಮಗಳನ್ನು ರಚಿಸಿದ್ದು, ಇದರ ಅಡಿಯಲ್ಲಿ ನೇಮಕಾತಿ ಪ್ರಾಧಿಕಾರಗಳನ್ನು ಸರ್ಕಾರಿ ಆದೇಶ ಸಂಖ್ಯೆ ಎಸ್ಡಬ್ಲ್ಯೂಎಲ್ 61 ಎಸ್‌ಇಟಿ 89 ದಿನಾಂಕ 29-11-93ರಲ್ಲಿ ರಚಿಸಿದೆ. ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಬೇಗ ತುಂಬಲಾಗುವುದು.